ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ **1207(1328)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ಎಸ್(ಮುಂಡರಗಿ)**
ಉತ್ತರಿಸುವವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು,ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಮುಂಡರಗಿ ಮತಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಬಂದಿದ್ದಲ್ಲಿ, ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಮುಂಡರಗಿ ಕ್ಷೇತ್ರದ ಸಮಸ್ಯಾತ್ಮಕ ಗ್ರಾಮಗಳಿಗೆ ತುರ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಸ್ಥಳೀಯ ಅವಶ್ಯಕತೆ ಆಧರಿಸಿ ಶಾಸಕರ ಅಧ್ಯಕ್ಷತೆಯಲ್ಲಿರುವ ಕಾರ್ಯಪಡೆಗಳ ಮುಖೇನ ಅಗತ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಈ ಸಲುವಾಗಿ ರೂ 16 00 ಲಕ್ಷಗಳನ್ನು ಈಗಾಗಲೇ ಬಿಡುಗಡೆಯಾಗಿದೆ ರಾಜ್ಯವಲಯದಡಿ ಗದಗ ಜಿಲ್ಲಾ ಪಂಚಾಯಿತಿಗೆ ರೂ 150 00 ಲಕ್ಷಗಳನ್ನು ಮಾರ್ಚ್ 2007ರಲ್ಲಿ ಬಿಡುಗಡೆ ಮಾಡಿದೆ 72 ಕೊಳವೆ ಬಾವಿಗಳನ್ನು ತಾಲ್ಲೂಕಿಗೆ ಮಂಜೂರು ಮಾಡಿದ್ದು ಇತರೆ ಪುನಶ್ಚೇತನ ಕಾಮಗಾರಿಗಳನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ **1208(1329)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಸ್ ಎಸ್(ಮುಂಡರಗಿ)**
ಉತ್ತರಿಸುವವರು **ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯ ವತಿಯಿಂದ ನಡೆಯುತ್ತಿರುವ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ, ಮುಂಡರಗಿ ಇವರಿಂದ ನೌಕರರ ಸಂಬಳ ನಿಲ್ಲಿಸಿರುವುದು ನಿಜವೇ,

ನಿಜ

ಆ) ಹಾಗಿದ್ದಲ್ಲಿ, ಅವರಿಗೆ ಎಷ್ಟು ತಿಂಗಳಿಂದ ನೌಕರರ ಸಂಬಳ ನಿಲ್ಲಿಸಲಾಗಿದೆ (ವಿವರ ನೀಡುವುದು)

ಸೆಪ್ಟಂಬರ್ 2006 ರಿಂದ ಫೆಬ್ರವರಿ 2007 ರವರೆಗೆ ನಿಲ್ಲಿಸಲಾಗಿತ್ತು

ಇ) ಸಂಬಳ ನಿಲ್ಲಿಸಲು ಕಾರಣಗಳೇನು,

ಸದರಿ ಶಿಕ್ಷಣ ಸಂಸ್ಥೆಯವರು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಪ್ರಾಧಿಕಾರವು ಅಪೀಲು ಸಂಖ್ಯೆ ಪಿಯುಎಪಿ 16/2005ರ ಮೇಲೆ ದಿನಾಂಕ 25 07 2005 ರಂದು ನೀಡಿದ ಆದೇಶವನ್ನು ಪಾಲಿಸದೇ ಇದ್ದುದರಿಂದ ವೇತನವನ್ನು ನಿಲ್ಲಿಸಲಾಗಿತ್ತು